ಸ್ತ್ರೀಗೆ ವಿದ್ಯಾಭ್ಯಾಸ ಕೊಡಿಸುವುದರಿಂದ ಆಗುವ ಸಾಧಕ ಬಾಧಕಗಳು. ಇಪ್ಪತ್ತನೆಯ ಶತಮಾನದ ಪ್ರಾರಂಭದ ಸುಧಾರಣಾವಾದಿ ಕಾದಂಬರಿಗಳಲ್ಲಿ ಸ್ತ್ರೀ ವಿದ್ಯಾಭ್ಯಾಸ ಅಗತ್ಯ ಎಂಬ ವಾದ ಖಚಿತವಾಗಿ ಮಂಡಿಸಲ್ಪಟ್ಟಿತ್ತು. ನವಗಿರಿನಂದರ ಕಾಲದಲ್ಲಿ ಸ್ತ್ರೀಯರ ವಿದ್ಯಾಭ್ಯಾಸ ಸಹಜವಾದ ಪ್ರಕ್ರಿಯೆಯಾಗಿತ್ತು, ಆದರೆ ಶಿಕ್ಷಣ ಪಡೆದ ಸ್ತ್ರೀಯರು ಸ್ವೇಚ್ಛಾವತಿಯರಾಗಿ ಅಡ್ಡದಾರಿ ಹಿಡಿಯುತ್ತಿದ್ದಾರೋ, ಕುಟುಂಬ ಜೀವನವನ್ನು ಉಲ್ಲಂಘಿಸಿ ಹೋಗುತ್ತಿದ್ದಾರೋ ಎಂಬ ಸಂಶಯ ಜನರಲ್ಲಿ ಮೂಡುತ್ತಿತ್ತು. ಹಲವಾರು ಉದಾಹರಣೆಗಳು ಈ ಸಂಶಯವನ್ನು ಸಮರ್ಥಿಸುವಂತಿದ್ದವು. ಇಂತಹ ಸಂದರ್ಭದಲ್ಲಿ ನವಗಿರಿನಂದರು ಸ್ತ್ರೀ ವಿದ್ಯಾಭ್ಯಾಸದ ಪರಿಣಾಮವನ್ನು ಅಭ್ಯಾಸ ಮಾಡುವ ಸಲುವಾಗಿಯೂ ಈ ಕಾದಂಬರಿಯನ್ನು ಬಳಸಿಕೊಂಡಿದ್ದಾರೆ. ಸ್ತ್ರೀ ಶಿಕ್ಷಣದ ಎಲ್ಲ ಕೆಡುಕುಗಳ ಪರಿಣಾಮಗಳನ್ನು ಪ್ರೇಮಾವತಿಯ ಜೀವನ ಚರಿತ್ರೆಯಿಂದ ತಿಳಿಯಬಹುದು. ಅವಳಿಗೆ ಒಳ್ಳೆಯ ಶಿಕ್ಷಣ ದೊರಕಿದ್ದರೂ ಬಾಹ್ಯ ಸೌಂದರ್ಯ, ತೋರಿಕೆಯ ಪ್ರೀತಿ ಇವುಗಳಿಗೆ ಮಾರು ಹೋಗುತ್ತಾಳೆ. ಪ್ರೀತಿಸಿದವನನ್ನು ಮದುವೆಯಾಗುವುದು ತನ್ನ ಸ್ವಾತಂತ್ರ್ಯ ಎಂದು ಅವಳು ನಿಜವಾಗಿಯೂ ನಂಬಿದ್ದರೆ ಅವಳು ಕದ್ದು ಮುಚ್ಚಿ, ತನ್ನವರಿಂದ ದೂರ ಓಡಿಹೋಗಿ ಸಂಸಾರ ಸಾಗಿಸುವೆನೆಂದು ಭಾವಿಸಬಾರದಿತ್ತು. ಹಾಗಾಗಿ ಕೆಡುಕಿನ ಮೂಲ ಇರುವುದು ಶಿಕ್ಷಣದಲ್ಲಲ್ಲ; ಅವಳ ವ್ಯಕ್ತಿತ್ವದ ದೋಷವಾದ ಅಹಂಕಾರದಲ್ಲಿಯೇ ಇದೆ ಎಂದು ಹೇಳಬಹುದು. ಶಿಕ್ಷಣದ ಜತೆಗೆ ವೈಚಾರಿಕತೆಯೂ ಬೆಳೆಯದಿದ್ದರೆ ಸ್ತ್ರೀಯರ ಅಧಃಪತನಕ್ಕೆ ಅದು ಹೇತುವಾಗುತ್ತದೆ ಎನ್ನುವುದನ್ನೂ ಲೇಖಕರು ಸೂಚಿಸುತ್ತಿರಬಹುದು.

ಅದೇ ವೇಳೆಗೆ ಸುಶಿಕ್ಷಿತರೂ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡವರೂ ಏನು ಮಾಡಬಹುದೆನ್ನುವುದನ್ನೂ ನವಗಿರಿನಂದರು ತೋರಿಸಿಕೊಟ್ಟಿದ್ದಾರೆ. ವಿಧವೆಯಾದ ಪ್ರಮೀಳಾ ಮತ್ತು ಕೇಶವರ ವಿವಾಹವನ್ನು ಆ ಕಾಲದ ತಂದೆ ತಾಯಿಗಳು ಮಾತ್ರವಲ್ಲ ಭಾರತೀಯ ಸಮಾಜವೂ ಸಹಜವೆಂದು ಭಾವಿಸಿರಲಾರದು. ಆದರೆ ಅವರು ಸಮಾಜವನ್ನು ಎದುರಿಸುವಷ್ಟು ಗಟ್ಟಿ ವೈಚಾರಿಕತೆ ಉಳ್ಳವರಾಗಿದ್ದಾರೆ. ಅವರು ಕದ್ದುಮುಚ್ಚಿ ಯಾರಿಗೂ ತಿಳಿಸದೆ ಮದುವೆಯಾಗಲು ಮುಂದಾಗುವುದಿಲ್ಲ. ಊರಿನಿಂದಲೂ ಓಡಿಹೋಗುವುದಿಲ್ಲ. ತಂದೆಯ ಒಪ್ಪಿಗೆ ಇಲ್ಲದಿದ್ದರೂ ಕೇಶವ ಪ್ರಮೀಳಾಳನ್ನು ಮದುವೆಯಾಗಿ ಅದೇ ಊರಿನಲ್ಲಿ ಬೇರೆ ಮನೆ ಮಾಡಿಕೊಂಡು ಇರುತ್ತಾನೆ.

ದಕ್ಷಿಣ ಕನ್ನಡ ಜಿಲ್ಲೆಯ ಬದುಕು, ಪ್ರಕೃತಿ ಸಂಪತ್ತು, ಕೃಷಿ ಇತ್ಯಾದಿಗಳನ್ನು ನವಗಿರಿನಂದರು ಈ ಕಾದಂಬರಿಯಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಕಾದಂಬರಿಯಲ್ಲಿ ಆತ್ಮವಿಮರ್ಶೆಯ ಸನ್ನಿವೇಶಗಳು, ಅಂತರಂಗದ ತಾಕಲಾಟಗಳು ಸೂಕ್ಷ್ಮವಾಗಿ ಚಿತ್ರಿತವಾಗಿವೆ. ಉದಾಹರಣೆಗೆ ರಾಮಪ್ಪಯ್ಯ ಯಾವಾಗಲೂ ಓದುವ ಭಗವದ್ಗೀತೆಗೂ, ಅವರ ಆಸೆಯ ಜೀವನಕ್ಕೂ ತಾಳೆಯಾಗುವುದಿಲ್ಲ. ಆದರೆ ಅವರು ತಮ್ಮ ಕಾಳಸಂತೆ ವ್ಯವಹಾರಕ್ಕೂ ಭಗವದ್ಗೀತೆಯ ಕರ್ಮಣ್ಯೇವಾಧಿಕಾರಸ್ತೇ ಸೂತ್ರದಿಂದ ಸಮರ್ಥನೆ ಮಾಡಿಕೊಳ್ಳುತ್ತಾರೆ. ಮುಂದೆ ದಾಮೋದರ ಆಭರಣಗಳ ಸಮೇತ ಕಣ್ಮರೆಯಾದಾಗ ಅವರು ಆತ್ಮಶೋಧನೆಗೆ ತೊಡಗಿಕೊಳ್ಳುತ್ತಾರೆ. ತಾನು ತಪ್ಪು ಮಾಡಿದ್ದರೂ ತನ್ನ ಕಷ್ಟದ ಬದುಕು, ಪೂಜೆ, ವಿಷ್ಣುಸಹಸ್ರನಾಮ, ವಾಯುಸ್ತುತಿ, ಗೀತಾಪಾರಾಯಣಗಳು ಅವುಗಳ ಪರಿಮಾರ್ಜನೆ ಮಾಡಲಾರವೆ ಎಂದೆಲ್ಲ ಯೋಚಿಸುತ್ತಾರೆ.

ಪ್ರೇಮಾವತಿ ತನ್ನ ಗಂಡ ಮಾಧವನ ಬಗ್ಗೆ ಅಸಹ್ಯ ಪಡುತ್ತಾ ಸುಂದರೇಶನಿಗಾಗಿ ಹಂಬಲಿಸುವ ಭಾಗಗಳು ಫ್ಲಾಬೇರ್‌ನ 'ಮದಾಮ್ ಬಾವರಿ' ಕಾದಂಬರಿಯ ನಾಯಕಿ ಮದಾಮ್ ಬಾವರಿಯನ್ನು ನೆನಪಿಸುತ್ತವೆ. ಮುಂದೆ ಅವಳ ಪಶ್ಚಾತ್ತಾಪದ ಆತ್ಮವಿಮರ್ಶೆಯ ಭಾಗಗಳೂ ಮನನೀಯವಾಗಿವೆ.

'ಕೊಳಸಾಲು' ಮತ್ತು 'ಹಸುರೂರು' (ದಾಮೋದರನ ಹೆಂಡತಿ ಪದ್ಮಾವತಿಯ ಊರು) ಎಂಬ ಹೆಸರುಗಳು ಕಾಲ್ಪನಿಕವಾಗಿ,